# ಶ್ರೀಕೃಷ್ಣನ ಪರಂಧಾಮದ ತಾಣ

ಗುಜರಾತ್ ರಾಜ್ಯದ ಪ್ರಭಾಸ್ ಕ್ಷೇತ್ರದ ಹತ್ತಿರ ಶ್ರೀಕೃಷ್ಣ ಪರಂಧಾಮಗೈದ ತಾಣವಿದೆ. ಅದುವೇ ಈ ಚಿತ್ರದಲ್ಲಿ ಕಾಣುತ್ತಿರುವ ಸ್ಥಳ. ಯಾತ್ರಾರ್ಥಿಗಳಿಗೆ ಇದು ಪವಿತ್ರ ಸ್ಥಳ. ಶ್ರೀ ಕೃಷ್ಣ ಅಂತ್ಯ ಕಾಲದಲ್ಲಿ ಬೇಟೆಗಾರನಿಂದ ಪರಂಧಾಮ ಹೊಂದಿದನು ಎಂಬ ಪ್ರತೀತಿಯಿದೆ. ಅದರ ಸಂಕೇತವನ್ನು ಈ ಚಿತ್ರ ಬಿಂಬಿಸುತ್ತದೆ. ಈ ಜಾಗದ ಪಕ್ಕದಲ್ಲಿ ತಿಳಿ ನೀರಿನ ನದಿ ಇದೆ. ಅದರ ಸುತ್ತಲೂ ಇರುವ ವೃಕ್ಷಗಳು ನಯನ ಮಹೋಹರವಾಗಿವೆ! ಗುಜರಾತ್‌ಗೆ ಹೋಗುವ ಯಾತ್ರಿಗಳನ್ನು ಕಣ್ತುಂಬಿಕೊಳ್ಳುವುದರಿಂದ ವಂಚಿತರಾಗುತ್ತೀರಿ.

— ಶ್ರೀಧರ ರಾಯಸಂ, ಬೆಂಗಳೂರು





# ವಿಶಿಷ್ಟ ಬೀಸುವ ಕಲ್ಲು

ಈ ಚಿತ್ರದಲ್ಲಿ ಕಾಣುತ್ತಿರುವುದು ಅತ್ಯಂತ ವಿಶಿಷ್ಟವಾಗಿ ವ್ಯವಸ್ಥಿತವಾಗಿ ರೂಪಿಸಿರುವ ಬೀಸುವ ಕಲ್ಲು. ನಿಂತು ಚಲಿಸುವಂತೆ ಎತ್ತರಕ್ಕೆ ಇದನ್ನು ಸ್ಥಾಪಿಸಿದ್ದು ಬೀಸಿದ ಹಿಟ್ಟು ಹರಿದು ಒಂದು ಕಡೆ ಸೇರುವಂತೆ ಇದನ್ನು ರಚಿಸಲಾಗಿದೆ. ಸಹಜವಾಗಿ ನಾವೆಲ್ಲ ನೋಡಿರುವಂತೆ ಬೀಸುವ ಕಲ್ಲನ್ನು ತೆಗೆದು ಪದೇ ಪದೇ ಹಿಟ್ಟನ್ನು ಕ್ರೋಢೀಕರಿಸುವ ಅವಶ್ಯಕತೆ ಈ ಬೀಸುವ ಕಲ್ಲಿನಲ್ಲಿ ಇಲ್ಲ. ಭೂತಾನ್ ದೇಶ ಪ್ರವಾಸ ಸಮಯದಲ್ಲಿ ರಾಜಧಾನಿ ಥಿಂಪುವಿನಲ್ಲಿನ 'ಜಸ್ಟ್ ಭೂತಾನ್' ಎನ್ನುವ ಮ್ಯೂಸಿಯಂನಲ್ಲಿ ಇದನ್ನು ಸಂರಕ್ಷಿಸಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತದೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

# 'ಗಂಡ ಭೇರುಂಡ'ನಂತೆ 'ಶರಭ'ನೂ

ನಮ್ಮ ಪುರಾಣ, ಕಥೆಗಳಲ್ಲಿ ಪ್ರಸ್ತಾಪವಾಗಿರುವ 'ಗಂಡ ಭೇರುಂಡ'ದಂತೆಯೇ ಶರಭವೂ ಕೂಡ ಒಂದು ಕಾಲ್ಪನಿಕ ಪಕ್ಷಿಯಾಗಿದೆ. ಕಾಡಿನ ರಾಜ ಸಿಂಹ ತಾನು ಯಾರಿಗೂ ಹೆದರದಿದ್ದರೂ ಈ ಶರಭನಿಗೆ ಹೆದರಿ ಶರಣಾಗುತ್ತದೆಯಂತೆ. ಇದರ ದೇಹ ಮಾನವನದ್ದಾಗಿದ್ದರೆ, ತಲೆ ಎರಡಾಗಿ ಪಕ್ಷಿಗಳದ್ದಾಗಿವೆ. ಇದು ಅದೆಷ್ಟು ಬಲಿಷ್ಠವಾದುದ್ದೆಂದರೆ. ತನ್ನೆರಡು ಕೈಗಳಲ್ಲಿ ಒಂದೊಂದು ಸಿಂಹವನ್ನು ಬಾಲದೊಂದಿಗೆ ಹಿಡಿದುಕೊಂಡಿದ್ದರೆ, ಕೊಕ್ಕಿನಲ್ಲೂ ಸಿಂಹಗಳನ್ನು ಹಿಡಿದುಕೊಂಡಿದೆ. ಶಿವನಿಗೆ ಸಂಬಂಧಿಸಿದ ದೇವಸ್ಥಾನಗಳಲ್ಲೇ ಇದನ್ನು ಹೆಚ್ಚಾಗಿ ಕಂಡಿರುತ್ತೀವಿ. ಈ ಚಿತ್ರದಲ್ಲಿರುವ ಶರಭನು ಶ್ರೀಶೈಲದ ಭ್ರಮರಾಂಭ ದೇವಾಲಯದ ಹೊರ ಭಿತ್ತಿಯಲ್ಲಿ ಕಂಡಿರುವುದನ್ನು ದರ್ಶನಾರ್ಥಿಗಳು ಅವಲೋಕಿಸಬಹುದು.

—ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ

